ಹೇಗೆ ಎಂದು ನಿನಗೆ ಯೋಚನೆ ಬರಲಿಲ್ಲವೆ?"

ಅವಳ ವಾಗ್ದಾಳಿಗೆ ಉತ್ತರ ಕೊಡಲಾಗದೆ ತಲೆ ತಗ್ಗಿಸಿದ ಶಶಿಧರ.

ಉದ್ವೇಗವನ್ನು ತಹಬದಿಗೆ ತಂದುಕೊಂಡು, "ಇಷ್ಟು ವರ್ಷ ಎಲ್ಲಿದ್ದೆ ಶಶಿ?" ಎಂದು ಕೇಳಿದಳು.

"ಮುಂಬೈ, ಅಹಮದಾಬಾದ್‌ಗಳಲ್ಲಿ ಕೆಲಸ ಮಾಡಿಕೊಂಡಿದ್ದೆ. ಈಗ ಒಂದು ವರ್ಷದಿಂದ ನಮ್ಮ ಮನೆಯಲ್ಲೇ ಇದ್ದೇನೆ."

"ಮನೆ ಅಂದರೆ! ಯಾರ ಮನೆಯಲ್ಲಿ?" ಅವನೆಡೆಗೆ ತೀಕ್ಷ್ಣವಾಗಿ ನೋಡುತ್ತಾ ಕೇಳಿದಳು.

"ನಮ್ಮ ಮನೆಯಲ್ಲಿ, ಅಪ್ಪ ಅಮ್ಮನ ಜೊತೆಯಲ್ಲಿ" ಶಾಂತವಾಗಿ ಹೇಳಿದ. ಹುಬ್ಬೇರಿಸಿದಳು ಸಂಜನಾ.

"ನಿಮ್ಮ ಮನೆಯಲ್ಲಿ!? ನಿಮ್ಮ ಅಪ್ಪ ನಿನ್ನನ್ನು ಮನೆಯಿಂದ ಹೊರಹಾಕಿದ್ದರಲ್ಲ!"

"ಅದು ಆಗ – ನಿನ್ನನ್ನು ಅವರ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗಿದ್ದಕ್ಕೆ. ನಾನು ನಿನ್ನಿಂದ ಬೇರೆಯಾಗಿದ್ದೇನೆ ಎಂದು ತಿಳಿದುಕೊಂಡ ಅವರು, 'ಆಗಿದ್ದೇನೋ ಆಗಿಹೋಯ್ತು. ಹಳೆಯದನ್ನೆಲ್ಲಾ ಮರೆತು ನಮ್ಮೊಂದಿಗಿರು. ಮುಂದೆ ನಿನ್ನ ಜೀವನ ಸುಖವಾಗಿರುವಂತೆ ನಾವು ನೋಡಿಕೊಳ್ಳೇವೆ' ಎಂದರು. ನಾನೀಗ ಬೇರೆಲ್ಲೂ ಕೆಲಸ ಮಾಡುತ್ತಿಲ್ಲ. ಅಪ್ಪನ ಕಾಂಟ್ರಾಕ್ಟ್ ಕೆಲಸ ಮಾಡಿಸುತ್ತಿದ್ದೇನೆ."

ಸ್ತಂಭೀಭೂತಳಾದಳು ಸಂಜನಾ. ತಾನು ಶಶಿಧರನನ್ನು ನಂಬಿಕೊಂಡು ಮನೆಯಿಂದ ಪರಿತ್ಯಕ್ತಳಾಗಿ, ಗಂಡನಿಂದಲೂ ದೂರವಾಗಿ, ಮಗಳಿಗಾಗಿ ನೆಲೆ ಕಂಡುಕೊಳ್ಳಲು ಪಡಬಾರದ ಕಷ್ಟ ಪಡುತ್ತಿದ್ದರೆ, ಶಶಿಧರ ಮನೆ ಸೇರಿಕೊಂಡು ಸುಖವಾಗಿದ್ದಾನೆ! ಒಂದು ವರ್ಷದಿಂದ ಮನೆಯಲ್ಲೇ ಇದ್ದೆನೆಂದನಲ್ಲಾ, ಅಪ್ಪ ಅಮ್ಮ ಹಾಗೂ ಕುಟುಂಬದವರ ಮನಃಸ್ಥಿತಿಯನ್ನು ಬದಲಾಯಿಸಿದ್ದಾನೊ ಹೇಗೆ? ಬಹುಶಃ ಅವರನ್ನೆಲ್ಲಾ ಒಪ್ಪಿಸಿ ತನ್ನನ್ನು ಹಾಗೂ ಮಗಳನ್ನು ಕರೆದುಕೊಂಡು ಹೋಗಲು ಬಂದಿರಬೇಕು. ತನಗೆ ತಾನೇ ಸಮಾಧಾನ ಮಾಡಿಕೊಂಡು ಆಶಾಗೋಪುರ ಕಟ್ಟಿಕೊಂಡಳು.

"ನಿನಗಿಷ್ಟವಾದ ಕೇಸರಿಬಾತು, ಉಪ್ಪಿಟ್ಟು, ಮೊಸರನ್ನ ಮಾಡಿದ್ದೇನೆ. ಮೊದಲು ಊಟಮಾಡಿ ಸುಧಾರಿಸಿಕೊ. ಆಮೇಲೆ ಮಾತನಾಡೋಣ."

ಸಂಜನಾ ಎರಡು ತಟ್ಟೆಗಳಲ್ಲಿ ಊಟ ತಂದಿಟ್ಟಳು. ಚಂದನಾಳಿಗೆ ತಿನ್ನಿಸುತ್ತಾ ತಾನೂ ತಿನ್ನತೊಡಗಿದಳು. ಶಶಿಧರ ಮೌನವಾಗಿ ಊಟ ಸವಿಯುತ್ತಿದ್ದ.

ಶಶಿಧರನ ಆಗಮನಕ್ಕೆ ಮುಂಚೆ ಸಂಜನಾ ಏನೇನೆಲ್ಲಾ ಕನಸು ಕಂಡಿದ್ದಳು. ಬಂದವನೇ ತನ್ನನ್ನು ತಬ್ಬಿಕೊಳ್ಳುತ್ತಾನೆ. ತನ್ನ ತಪ್ಪನ್ನು ಒಪ್ಪಿಕೊಂಡು ತನ್ನನ್ನು ರಮಿಸುತ್ತಾನೆ. ಚಂದನಾಳನ್ನು ಎತ್ತಿಕೊಂಡು ಆಟವಾಡಿಸುತ್ತಾನೆ. ಆದರೆ ಅಂತಹದು ಯಾವುದೂ ಅಲ್ಲಿ ನಡೆಯಲಿಲ್ಲ. ತಾನಂದುಕೊಂಡಂತೆ ಏನೂ ಆಗದೆ ತನಗೆ ತಾನೆ ಸಮಾಧಾನ ಪಟ್ಟುಕೊಂಡಳು.

ಬಹುಶಃ ಆರು ವರ್ಷಗಳ ನಂತರ ಭೇಟಿಯಾಗಿದ್ದರಿಂದ ಸಲುಗೆ ತೆಗೆದುಕೊಳ್ಳಲು ಶಶಿಧರನಿಗೂ ಮುಜುಗರವೆನಿಸಿರಬೇಕು. ಶಶಿಧರ ಊಟ ಮುಗಿಸಿದ ಕೂಡಲೇ, "ನೀನು ಸುಸ್ತಾಗಿರಬೇಕು. ಈಗ ವಿಶ್ರಾಂತಿ ತಗೋ. ಬೆಳಗ್ಗೆ ಮಾತಾಡೋಣ" ಎನ್ನುತ್ತಾ ಎದ್ದ ಸಂಜನಾ ಕೂತಲ್ಲೇ ಮಲಗಿದ್ದ ಚಂದನಾಳನ್ನು ಎತ್ತಿಕೊಂಡು ಹೋಗಿ ಕೋಣೆಯೊಂದರಲ್ಲಿ ಮಲಗಿಸಿಬಂದಳು.

"ನನಗೀಗ ವಿಶ್ರಾಂತಿ ಬೇಡ. ನಾನು ಸ್ವಲ್ಪ ಹೊತ್ತಿಗೆ ಹೊರಡಬೇಕು" ಎನ್ನುತ್ತಾ ಮನೆಯ